

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 01–06–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಬ್ಬ ಸಹಾಬಿ ಹಝ್ರತ್ ಉಕಾಶ ಬಿನ್ ಮುಹ್‌ಸಿನ್. ಇವರು ಶ್ರೇಷ್ಠ ಸಹಾಬಿಗಳ ಪೈಕಿ ಒಬ್ಬರಾಗಿದ್ದರು. ಬದರ್ ಯುದ್ಧದಲ್ಲಿ ಅವರು ಕುದುರೆ ಸವಾರನಾಗಿ ಭಾಗವಹಿಸಿದರು. ಯುದ್ಧದಲ್ಲಿ ಅವರ ಖಡ್ಗ ಮುರಿದು ಹೋಯಿತು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಮರದ ತುಂಡು ಅವರಿಗೆ ಕೊಟ್ಟರು. ಅದು ಅವರ ಕೈಯ್ಯಲ್ಲಿ ಅತ್ಯಂತ ಹರಿತವಾದ ಕಬ್ಬಿಣದ ಖಡ್ಗದ ಹಾಗೆ ಆಯಿತು. ಅವರು ಅದನ್ನು ಬಳಸಿ ಹೋರಾಡಿದರು. ಕೊನೆಗೆ ಅಲ್ಲಾಹನು ಜಯ ನೀಡಿದನು. ಅವರು ಈ ಖಡ್ಗ ಬಳಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಮರದ ಈ ಖಡ್ಗ ಅವರು ಮೃತರಾಗುವ ತನಕ ಅವರ ಜೊತೆಗೆ ಇತ್ತು. ಅದರ ಹೆಸರು ಔನ್ ಎಂದಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಶುಭವಾರ್ತೆ ನೀಡಿದ್ದರು– ಲೆಕ್ಕಾಚಾರ ನಡೆಸದೆ ಸ್ವರ್ಗಕ್ಕೆ ಪ್ರವೇಶಿಸಲ್ಪಡುವರು ಎಂದು. ಬದರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ಹೇಳಿದರು: ಅರಬ್ ದೇಶದ ಅತ್ಯುತ್ತಮ ಕುದುರೆ ಸವಾರನಾದ ಯೋಧ ನಮ್ಮ ಜೊತೆಗಿದ್ದಾರೆ. ಸಹಾಬರು ಕೇಳಿದರು ಅವರು ಯಾರು ಎಂದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಉಕಾಶ ಬಿನ್ ಮುಹ್‌ಸಿನ್.

ಹಝ್ರತ್ ಅಬೂಹುರೈರ ವರದಿ ಮಾಡುತ್ತಾರೆ, ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಆಲಿಸಿದೆ, ಅವರು ಹೇಳಿದರು ನನ್ನ ಅನುಯಾಯಿಗಳ ಒಂದು ಗುಂಪು ಸ್ವರ್ಗವನ್ನು ಪ್ರವೇಶಿಸುವುದು. ಅವರು ಎಪ್ಪತ್ತು ಸಾವಿರವಿದ್ದು ಅವರ ಮುಖ ಚಹರೆ ಹದಿನಾಲ್ಕನೆಯ ರಾತ್ರಿಯ ಚಂದ್ರನಂತೆ ಪ್ರಕಾಶಿಸುತ್ತಿರುವುದು. ಆಗ ಉಕಾಶ ಬಿನ್ ಮುಹ್‌ಸಿನ್ ಎದ್ದು ನಿಂತು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ನನ್ನನ್ನು ಸಹ ಅವರಲ್ಲಿ ಒಬ್ಬನನ್ನಾಗಿ ಮಾಡಲಿ ಎಂದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪ್ರಾರ್ಥಿಸಿದರು: ಓ ಅಲ್ಲಾಹ್ ಇವರನ್ನು ಸಹ ಅವರೊಂದಿಗೆ ಸೇರಿಸು. ಆಗ ಒಬ್ಬ ಅನ್‌ಸಾರ್ ಎದ್ದು ನಿಂತು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ನನ್ನನ್ನು ಸಹ ಅವರೊಂದಿಗೆ ಸೇರಿಸಲು ಪ್ರಾರ್ಥಿಸಿರಿ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು ಉಕಾಶ ಇದಕೆ ಸಂಬಂಧಿಸಿ ನಿನಗಿಂತ ಆದ್ಯತೆ ಗಳಿಸಿರುವರು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಕಾಶರನ್ನು ವಿವಿಧ ದಂಡಯಾತ್ರೆಗಳಲ್ಲಿ ಅಮೀರ್ ಆಗಿ ನೇಮಿಸಿ ಕಳುಹಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜರಿ ಆರನೆ ವರ್ಷ ರಬೀಉಲ್ ಅವ್ವಲ್ ತಿಂಗಳಲ್ಲಿ ನಲ್ವತ್ತು ಮುಸ್ಲಿಮರ ಮೇಲಧಿಕಾರಿಯಾಗಿ ಅವರನ್ನು ನೇಮಿಸಿ ಬನೀ ಅಸದ್ ಗೋತ್ರವನ್ನು ಎದುರಿಸಲು ಕಳುಹಿಸಿದರು. ಈ ಗೋತ್ರದ ಜನರು ಒಂದು ನೀರೊರತೆಯ ಸಮೀಪ ಠಿಕಾಣಿ ಹೂಡಿದ್ದರು. ಅದರ ಹೆಸರು ಗಮ್ರ್ ಎಂದಾಗಿತ್ತು. ಅದು ಮದೀನದಿಂದ ಮಕ್ಕದ ದಾರಿಯಲ್ಲಿ ಕೆಲವು ದಿನಗಳ ದೂರದಲ್ಲಿತ್ತು. ಉಕಾಶರ ಗುಂಪು ಬೇಗ ಬೇಗನೆ ಯಾತ್ರೆ ಮಾಡಿ ಅವರನ್ನು ದುಷ್ಕೃತ್ಯಗಳಿಂದ ತಡೆಯಲು ಉದ್ದೇಶಿಸಿತ್ತು. ಆದರೆ ಮುಸ್ಲಿಮರ ಆಗಮನದ ಬಗ್ಗೆ ಮುಂಚಿತವಾಗಿ ಸಮಾಚಾರ ಗಳಿಸಿದ ಆ ಗೋತ್ರದ ಜನರು ಅಲ್ಲಿಂದ ಚದುರಿ ಹೋಗಿದ್ದರು. ಆ ಕಾರಣದಿಂದ ಉಕಾಶ ಮತ್ತು ಅವರ ಸಂಗಾಡಿಗರು ಮದೀನಕ್ಕೆ ಮರಳಿ ಬಂದರು. ಯಾವುದೇ ಯುದ್ಧ ನಡೆಯಲಿಲ್ಲ.

ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಸೂರತುನ್ನಸ್ರ್ ಅವತೀರ್ಣವಾದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್‌ರೊಂದಿಗೆ ಅಝಾನ್ ಕರೆ ನೀಡಲು ಹೇಳಿದರು. ನಮಾಝ್ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಖುತ್‌ಬ ನೀಡಿದರು. ಅದನ್ನು ಆಲಿಸಿ ಜನರು ಬಹಳ ಅತ್ತರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನಾನು ಎಂತಹ ಪ್ರವಾದಿ ಎಂದು. ಆಗ ಜನರು ಹೇಳಿದರು: ಅಲ್ಲಾಹನು ನಿಮಗೆ ಉತ್ತಮ ಪ್ರತಿಫಲ ನೀಡಲಿ ನೀವು ಎಲ್ಲರಿಗಿಂತ ಅತ್ಯುತ್ತಮ ಪ್ರವಾದಿ ಆಗಿದ್ದೀರಿ. ನೀವು ನಮಗೆ ಕಾರುಣ್ಯಮಯ ಪಿತನ ಹಾಗೆ ಮತ್ತು ವಾತ್ಸಲ್ಯ ಭರಿತ ಉಪದೇಶ ನೀಡುವ ಸಹೋದರನ ಹಾಗೆ ಇರುವಿರಿ. ನೀವು ನಮಗೆ ಅಲ್ಲಾಹನ ಸಂದೇಶವಾಣಿಗಳನ್ನು ತಲುಪಿಸಿರುವಿರಿ. ವಿವೇಕಭರಿತ ಉತ್ತಮ ಉಪದೇಶಗಳಿಂದ ನಮ್ಮನ್ನು ನಮ್ಮ ಪ್ರಭುವಿನ ಮಾರ್ಗದ ಕಡೆಗೆ ಕರೆದಿರುವಿರಿ. ಆದುದರಿಂದ ಅಲ್ಲಾಹನು ತನ್ನ ಪ್ರವಾದಿಗಳಿಗೆ ನೀಡಿದ ಹಾಗೆ ಅತ್ಯುತ್ತಮ ಪ್ರತಿಫಲವನ್ನು ತಮಗೆ ನೀಡಲಿ ಎಂದು ಹೇಳಿದರು.

ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಓ ಮುಸ್ಲಿಮ್ ಸಮೂಹವೇ, ನಾನು ಅಲ್ಲಾಹನಾಣೆ ಹಾಕಿ ಮತ್ತು ನಿಮ್ಮ ಮೇಲೆ ನನಗಿರುವ ಹೊಣೆಗಾರಿಕೆಯ ಆಣೆ ಹಾಕಿ ಹೇಳುತ್ತೇನೆ– ಯಾರಿಗಾದರೂ ನನ್ನಿಂದ ಏನಾದರೂ ದೌರ್ಜನ್ಯ ಅಥವಾ ತೊಂದರೆ ಆಗಿದ್ದರೆ ಅವರು ಎದ್ದು ನಿಂತು ನನ್ನಿಂದ ಪ್ರತೀಕಾರ ತೀರಿಸಲಿ. ಆಗ

ಯಾರೂ ಎದ್ದು ನಿಲ್ಲಲಿಲ್ಲ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎರಡನೆಯ ಸಾರಿ ಆಣೆ ಹಾಕಿ ಹೇಳಿದರೂ ಯಾರೂ ಎದ್ದು ನಿಲ್ಲಲಿಲ್ಲ. ಮೂರನೆಯ ಸಾರಿ ಅವರು ತನ್ನ ಮಾತನ್ನು ಪುನರಾವರ್ತಿಸಿದರು. ಖಿಯಾಮತ್ ದಿನದ ಮೊದಲು ಈ ಪ್ರತೀಕಾರ ಮಾಡಿರಿ ಎಂದು ಹೇಳಿದರು. ಆಗ ಜನರ ಪೈಕಿ ಒಬ್ಬ ವೃದ್ಧ ಎದ್ದು ನಿಂತರು. ಅವರ ಹೆಸರು ಉಕಾಶ ಎಂದಾಗಿತ್ತು. ಅವರು ಜನರ ಮಧ್ಯೆ ದಾಟಿಕೊಂಡು ಮುಂದೆ ಬಂದು ನಿಂತರು ಮತ್ತು ಹೇಳಿದರು: ನನ್ನ ತಂದೆ ತಾಯಂದಿರು ನಿಮಗೋಸ್ಕರ ತಮ್ಮನ್ನು ಬಲಿಯರ್ಪಿಸುವವರಾಗಲಿ. ನೀವು ನಿಮ್ಮ ಮಾತನ್ನು ಆಣೆ ಹಾಕಿ ಪುನರಾವರ್ತಿಸದೆ ಇರುತ್ತಿದ್ದರೆ ನಾನು ಎದ್ದು ನಿಲ್ಲುತ್ತಿರಲಿಲ್ಲ. ನಾನು ಒಂದು ಯುದ್ಧದಲ್ಲಿ ತಮ್ಮ ಜೊತೆಗೆ ಭಾಗವಹಿಸಿದ್ದೆ. ಆ ಯುದ್ಧದಿಂದ ಮರಳಿ ಬರುವಾಗ ನನ್ನ ಒಂಟೆ ತಮ್ಮ ಒಂಟೆಗೆ ಸಮೀಪವಾಯಿತು. ಆಗ ನಾನು ಒಂಟೆಯಿಂದ ಇಳಿದು ತಮ್ಮ ಸಮೀಪಕ್ಕೆ ಬಂದೆನು. ತಮ್ಮ ಪಾದವನ್ನು ಚುಂಬಿಸಲು ನಾನು ಉದ್ದೇಶಿಸಿದ್ದೆ. ಆಗ ತಾವು ಚಾಟಿ ಬೀಸಿದಾಗ ನನ್ನ ಪಕ್ಕಕ್ಕೆ ತಗಲಿತು. ಆ ಚಾಟಿಯನ್ನು ತಾವು ಒಂಟೆಗೆ ಬಾರಿಸಿದಿರೋ ಅಥವಾ ನನಗೋ ಎಂದು ನಾನರಿಯೆ ಎಂದು ಹೇಳಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನ ಪ್ರತಾಪದಾಣೆ, ಅಲ್ಲಾಹನ ಸಂದೇಶವಾಹಕ ಪ್ರಜ್ಞಾಪೂರ್ವಕವಾಗಿ ನಿಮಗೆ ಹೊಡೆಯಲಾರ. ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಬಿಲಾಲ್, ಫಾತಿಮ ಬಳಿಗೆ ಹೋಗಿ ಆ ಚಾಟಿಯನ್ನು ತಾ. ಹಝ್ರತ್ ಬಿಲಾಲ್ ಆ ಚಾಟಿಯನ್ನು ತಂದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಚಾಟಿಯನ್ನು ಉಕಾಶರಿಗೆ ಕೊಟ್ಟು 'ನನಗೆ ಹೊಡೆ' ಎಂದರು. ಹಝ್ರತ್ ಉಕಾಶ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ತಾವು ನನಗೆ ಚಾಟಿಯಿಂದ ಹೊಡೆದಾಗ ನನ್ನ ಹೊಟ್ಟೆಯ ಮೇಲೆ ಬಟ್ಟೆ ಇರಲಿಲ್ಲ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಹೊಟ್ಟೆಯಿಂದ ಬಟ್ಟೆಯನ್ನು ಸರಿಸಿದರು. ಇದನ್ನು ಕಂಡಾಗ ಮುಸ್ಲಿಮರು ರೋದಿಸತೊಡಗಿದರು. ಉಕಾಶ ವಾಸ್ತವಿಕವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹೊಡೆಯುವರೇ. ಆದರೆ ಹಝ್ರತ್ ಉಕಾಶ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೇಹದ ಬಿಳಿ ಬಣ್ಣವನ್ನು ನೋಡಿದಾಗ ಉನ್ಮತ್ತನಂತೆ ಮುಂದೆ ದಾವಿಸಿ ಅವರ ದೇಹವನ್ನು ಚುಂಬಿಸತೊಡಗಿದರು. ಅವರು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ತಮಗೆ ಪ್ರತೀಕಾರ ಮಾಡಲು ಯಾರ ಹೃದಯ ಇಚ್ಛಿಸಲು ಸಾಧ್ಯ? ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪ್ರತೀಕಾರ ಮಾಡುವಿರಾ ಅಥವಾ ಕ್ಷಮಿಸುವಿರಾ? ಆಗ ಹಝ್ರತ್ ಉಕಾಶ ಹೇಳಿದರು: ನಾನು ಕ್ಷಮಿಸಿರುವೆನು. ಖಿಯಾಮತ್ ದಿನ ಅಲ್ಲಾಹನಿಂದ ನಾನು ಕ್ಷಮಿಸಲ್ಪಡಲಿಕ್ಕೋಸ್ಕರ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನರೊಂದಿಗೆ ಹೇಳಿದರು: ಸ್ವರ್ಗದಲ್ಲಿ ನನ್ನ ಜೊತೆಗಾರರನ್ನು ನೋಡಲು ಬಯಸುವವರು ಈ ವೃದ್ಧನನ್ನು ನೋಡಲಿ. ಆಗ ಮುಸ್ಲಿಮರು ಎದ್ದು ಉಕಾಶರ ಹಣೆಯನ್ನು ಚುಂಬಿಸಲು ತೊಡಗಿದರು. ಮತ್ತು ಅವರಿಗೆ ಶುಭಾಶಯಗಳನ್ನು ಅರ್ಪಿಸಿದರು. ನೀವು ಬಹಳ ಉನ್ನತ ಸ್ಥಾನವನ್ನೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹವಾಸವನ್ನೂ ಪಡೆದಿರುವಿರಿ ಎಂದು ಹೇಳಿದರು.

ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಖಿಲಾಫತ್ ಕಾಲದಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದರೊಂದಿಗೆ ಹಝ್ರತ್ ಉಕಾಶ ಧರ್ಮತ್ಯಾಗಿಗಳ ವಿರುದ್ಧ ಹೋರಾಡಲು ಹೊರಟಿದ್ದರು. ಹಝ್ರತ್ ಖಾಲಿದ್ ಬಿನ್ ವಲೀದರು ಹಝ್ರತ್ ಉಕಾಶ ಬಿನ್ ಮುಹ್‌ಸಿನ್ ಮತ್ತು ಹಝ್ರತ್ ಸಾಬಿತ್ ಬಿನ್ ಅಕ್‌ರಮರನ್ನು ಗೂಢಚಾರರನ್ನಾಗಿ ಮಾಡಿ ಶತ್ರುಗಳ ಸಮಾಚಾರ ತರಲು ಕಳುಹಿಸಿದರು. ಅವರಿಬ್ಬರೂ ಕುದುರೆ ಸವಾರಿ ಮಾಡುತ್ತಾ ಹೋದರು. ಹಝ್ರತ್ ಉಕಾಶರ ಕುದುರೆಯ ಹೆಸರು ಅರ್‌ರಝಾಮ್ ಎಂದಾಗಿತ್ತು. ಹಝ್ರತ್ ಸಾಬಿತರ ಕುದುರೆಯ ಹೆಸರು ಅಲ್ ಮುಜರ್ರ್ ಎಂದಾಗಿತ್ತು. ಅವರಿಬ್ಬರ ಎದುರಿಗೆ ತಲೀಹ ಮತ್ತು ಅವನ ಸಹೋದರ ಸಲಿಮ ಬಂದರು. ಈ ಇಬ್ಬರು ಗೂಢಚಾರರಾಗಿ ತಮ್ಮ ಸೈನ್ಯದಿಂದ ಮುಂದೆ ಬಂದಿದ್ದರು. ಹಝ್ರತ್ ಉಕಾಶರನ್ನು ಎದುರಿಸಿ ತಲೀಹ ಅವರನ್ನು ಶಹೀದರನ್ನಾಗಿ ಮಾಡಿದನು. ಸಲಿಮ ಹಝ್ರತ್ ಸಾಬಿತರನ್ನು ಶಹೀದರನ್ನಾಗಿ ಮಾಡಿದನು. ಈ ರೀತಿ ಆ ಇಬ್ಬರು ಸಹಾಬರ ಶಹಾದತ್ ಉಂಟಾಯಿತು. ಇದು ಹಿಜರಿ ಹನ್ನೆರಡನೆ ವರ್ಷ ಸಂಭವಿಸಿತು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಇನ್ನೊಬ್ಬ ಸಹಾಬಿ ಹಝ್ರತ್ ಖಾರಿಜ ಬಿನ್ ಝ್ಯೆದ್. ಅವರು ಖಝ್‌ರಜ್ ಗೋತ್ರದ ಪ್ರಮುಖರಲ್ಲಿ ಒಬ್ಬರಾಗಿದ್ದರು. ಅವರ ಪುತ್ರಿ ಹಝ್ರತ್ ಹಬೀಬ ಹಝ್ರತ್ ಅಬೂಬಕರ್‌ರವರ ಪತ್ನಿಯಾಗಿದ್ದರು. ಅವರು ಹಝ್ರತ್ ಉಮ್ಮುಕುಲ್‌ಸುಮರಿಗೆ ಜನ್ಮ ನೀಡಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಖಾರಿಜ ಬಿನ್ ಝ್ಯೆದ್ ಮತ್ತು ಹಝ್ರತ್ ಅಬೂಬಕರ್ ಸಿದ್ದೀಖ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಅವರು ತಮ್ಮ ಗೋತ್ರದ ಪ್ರಮುಖರಾಗಿದ್ದರು. ಅವರನ್ನು ಹಿರಿಯ ಸಹಾಬರ ಜೊತೆ ಸೇರಿಸಿದ್ದರು. ಅವರು ಉಖ್‌ಬದಲ್ಲಿ ಬೈಅತ್ ಮಾಡಿದ್ದರು. ಮದೀನಕ್ಕೆ ಹಿಜ್‌ರತ್ ಮಾಡಿದ ನಂತರ ಹಝ್ರತ್ ಅಬೂಬಕರ್ ಸಿದ್ದೀಖ್ ಖಾರಿಜ ಬಿನ್ ಝ್ಯೆದರ ಮನೆಯಲ್ಲಿ ವಾಸಿಸಿದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಉಹುದ್ ಯುದ್ಧದಲ್ಲಿ ಬಹಳ ಶೌರ್ಯದಿಂದ ಹೋರಾಡಿ ಶಹೀದರಾದರು. ಈಟಿಗಳ ಆಕ್ರಮಣಕ್ಕೆ ಪಾತ್ರರಾದ ಅವರ ಶರೀರದಲ್ಲಿ ಹದಿಮೂರಕ್ಕಿಂತ ಹೆಚ್ಚು ಗಾಯಗಳು ಆಗಿದ್ದುವು. ಅವರು ಗಾಯಗೊಂಡು ನಿಸ್ಸಹಾಯಕರಾಗಿ ಬಿದ್ದಿದ್ದಾಗ ಸಫ್‌ವಾನ್ ಬಿನ್ ಉಮಯ್ಯ ಅವರನ್ನು ಗುರುತಿಸಿ ಶಹೀದರನ್ನಾಗಿ ಮಾಡಿದನು. ಅವರ ಕಿವಿ, ಮೂಗುಗಳನ್ನು ಕತ್ತರಿಸಿ ಹೇಳಿದನು: ಈ ವ್ಯಕ್ತಿ ನನ್ನ ಪಿತ ಉಮಯ್ಯ ಬಿನ್ ಖಲ್‌ಫ್‌ರನ್ನು ಹತ್ಯೆ ಮಾಡಿದವನಾಗಿದ್ದಾನೆ. ನನಗೆ

ಮುಹಮ್ಮದರ ಅತ್ಯುತ್ತಮ ಸಂಗಾತಿಗಳನ್ನು ಕೊಲ್ಲುವ ಮತ್ತು ನನ್ನ ಹೃದಯಕ್ಕೆ ತಂಪು ಉಂಟು ಮಾಡುಲು ಸಂದರ್ಭ ಲಭಿಸಿದೆ. ನಂತರ ಅವನು ಹಝ್ರತ್ ಇಬ್ನು ಖೌಖಲ್, ಹಝ್ರತ್ ಖಾರಿಜ ಬಿನ್ ಝೈದ್ ಮತ್ತು ಹಝ್ರತ್ ಔಸ್ ಬಿನ್ ಅರ್‌ಖಮ್‌ರನ್ನು ಸಹ ಶಹೀದರನ್ನಾಗಿ ಮಾಡಿದನು.

ಹಝ್ರತ್ ಖಾರಿಜರನ್ನು ಅವರ ಚಿಕ್ಕಪ್ಪನ ಮಗ ಸಅದ್ ಬಿನ್ ರಬೀಅ್‌ರ ಜನಾಝುದೊಂದಿಗೆ ಒಂದೇ ಖಬರಿನಲ್ಲಿ ದಫನು ಮಾಡಲಾಗಿತ್ತು. ಉಹುದ್ ಯುದ್ಧದ ದಿನದಲ್ಲಿ ಹಝ್ರತ್ ಅಬ್ಬಾಸ್ ಬಿನ್ ಉಬಾದ ಉಚ್ಚ ಸ್ವರದಲ್ಲಿ ಹೇಳುತ್ತಿದ್ದರು: ಓ ಮುಸ್ಲಿಮರೇ, ಅಲ್ಲಾಹ್ ಮತ್ತು ಅವನ ಪ್ರವಾದಿಯೊಂದಿಗೆ ಜೋಡಿಸಿಕೊಳ್ಳಿರಿ. ನಿಮಗೆ ಈಗ ಸಂಭವಿಸಿರುವ ವಿಪತ್ತು ನೀವು ನಿಮ್ಮ ಪ್ರವಾದಿಯ ಆಜ್ಞೆಯನ್ನು ಉಲ್ಲಂಘಿಸಿದ ಕಾರಣದಿಂದ ಉಂಟಾಗಿದೆ. ಅವರು ನಿಮಗೆ ಸಹಾಯ ತಲಪಿಸುವ ವಾಗ್ದಾನ ಮಾಡಿದ್ದರು. ಆದರೆ ನೀವು ಸಹನೆ ದೋರಲಿಲ್ಲ. ನಂತರ ಹಝ್ರತ್ ಅಬ್ಬಾಸ್ ಬಿನ್ ಉಬಾದ ತನ್ನ ಕವಚವನ್ನು ಕಳಚಿ ಹಝ್ರತ್ ಖಾರಿಜರೊಂದಿಗೆ ಹೇಳಿದರು: ನಿಮಗೆ ಇದರ ಆವಶ್ಯಕತೆ ಇದೆಯೇ ಎಂದು. ಖಾರಿಜ ಹೇಳಿದರು: ನನಗೆ ಬೇಡ. ನೀವು ಇಚ್ಛಿಸುವುದನ್ನೇ ನಾನು ಸಹ ಇಚ್ಛಿಸುತ್ತೇನೆ. ಅವರು ಅನಂತರ ಶತ್ರುಗಳನ್ನು ಎದುರಿಸಿದರು. ಅಬ್ಬಾಸ್ ಬಿನ್ ಉಬಾದ ಹೇಳುತ್ತಾರೆ: ನಮ್ಮ ಕಣ್ಣ ಮುಂದೆಯೇ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಏನಾದರೂ ಕಷ್ಟವುಂಟಾದರೆ ನಾವು ನಮ್ಮ ಪ್ರಭುವಿನ ಮುಂದೆ ಯಾವ ನೆವನ ಹೇಳಲು ಸಾಧ್ಯ? ಹಝ್ರತ್ ಖಾರಿಜ ಹೇಳಿದರು: ನಮ್ಮ ಪ್ರಭುವಿನ ಸನ್ನಿಧಿಯಲ್ಲಿ ನಮಗೆ ಯಾವ ನೆವನವಾಗಲಿ ಪುರಾವೆಯಾಗಲಿ ಇರಲಾರದು. ಹಝ್ರತ್ ಅಬ್ಬಾಸ್ ಬಿನ್ ಉಬಾದರನ್ನು ಸಫ್‌ವಾನ್ ಶಹೀದರನ್ನಾಗಿ ಮಾಡಿದನು. ಖಾರಿಜರಿಗೆ ಈಟಿಯಿಂದ ಹತ್ತಕ್ಕಿಂತ ಹೆಚ್ಚು ಗಾಯಗಳಾಗಿದ್ದುವು. ಉಹುದ್ ಯುದ್ಧದ ಸಂದರ್ಭದಲ್ಲಿ ಅವರ ಸಮೀಪಕ್ಕೆ ಹಝ್ರತ್ ಮಾಲಿಕ್ ಬಿನ್ ದುಖ್‌ಶಮ್ ತಲಪಿದರು. ಅವರು ಗಾಯಗೊಂಡ ಖಾರಿಜರೊಂದಿಗೆ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಶಹೀದರನ್ನಾಗಿ ಮಾಡಲಾಗಿದೆ. ಆಗ ಖಾರಿಜ ಹೇಳಿದರು: 'ಅವರು ಶಹೀದರಾಗಿದ್ದರೆ ಖಂಡಿತವಾಗಿ ಅಲ್ಲಾಹನು ಜೀವಂತವಾಗಿದ್ದಾನೆ, ಅವನು ಮೃತನಾಗಲಾರನು. ನೀವು ಸಹ ನಿಮ್ಮ ಧರ್ಮಕ್ಕೋಸ್ಕರ ಹೋರಾಡಿರಿ ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಮಗೆ ಸಂದೇಶ ತಲಪಿಸಿದ್ದಾರೆ.'

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಇನ್ನೊಬ್ಬ ಸಹಾಬಿ ಹಝ್ರತ್ ಝಿಯಾದ್ ಬಿನ್ ಲಬೀದ್. ಅಖಬ ಸಾನಿಯದ ಸಂದರ್ಭದಲ್ಲಿ ಅವರು ಎಪ್ಪತ್ತು ಜನರೊಂದಿಗೆ ಬಂದು ಇಸ್ಲಾಮ್ ಧರ್ಮಕ್ಕೆ ಸೇರಿದರು. ಅವರು ಮದೀನಕ್ಕೆ ಮರಳಿ ಬಂದ ಕೂಡಲೇ ಬನೂ ಬಯಾಝ್ ಗೋತ್ರದ ವಿಗ್ರಹವನ್ನು ಮುರಿದು ಹಾಕಿದರು. ಅನಂತರ ಮಕ್ಕಕ್ಕೆ ಹೋಗಿ ಅಲ್ಲಿಯೇ ವಾಸಿಸಲು ತೊಡಗಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಹಿಜ್‌ರತ್ ಹೋದ ನಂತರ ಅವರು ಸಹ ಮದೀನಕ್ಕೆ ಹಿಜ್‌ರತ್ ಮಾಡಿದರು. ಆದುದರಿಂದ ಅವರನ್ನು ಮಹಾಜಿರ್ ಅನ್‌ಸಾರಿ ಎಂದು ಕರೆಯುತ್ತಿದ್ದರು. ಹಝ್ರತ್ ಝಿಯಾದ್ ರವರು ಬದರ್, ಉಹುದ್, ಖಂದಕ್, ಮತ್ತು ಇತರ ಎಲ್ಲಾ ಯುದ್ಧಗಳಲ್ಲಿಯೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜ್‌ರತ್ ಮಾಡಿ ಮದೀನ ತಲಪಿದಾಗ ಬನೂ ಬಯಾಝ್ ಗೋತ್ರದ ಬಡಾವಣೆಯಲ್ಲಿ ದಾಟಿಹೋಗುವಾಗ ಹಝ್ರತ್ ಝಿಯಾದ್ ಅಹ್‌ಲನ್ ವಸಹ್‌ಲನ್ ಹೇಳಿ ಸ್ವಾಗತಿಸಿ ತನ್ನ ಮನೆಯನ್ನು ಅವರ ವಾಸಕ್ಕೆ ನೀಡುವುದಾಗಿ ಪ್ರಸ್ತಾಪಿಸಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನನ್ನ ಒಂಟೆಯನ್ನು ಮುಂದೆ ಸಾಗಲು ಬಿಡಿರಿ. ಅದು ಸ್ವತಃ ತಂಗುದಾಣದಲ್ಲಿ ನಿಲ್ಲುವುದು.

ಹಿಜರಿ 9 ಮಹರ್ರಮ್ ತಿಂಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝಕಾತ್ ಸದಖ ಮೊದಲಾದವುಗಳನ್ನು ಸಂಗ್ರಹಿಸಲು ಬೇರೆ ಬೇರೆ ಸಂಗ್ರಹಕರನ್ನು ನಿಶ್ಚಯಿಸಿದರು. ಆಗ ಹಝ್ರತ್ ಝಿಯಾದರನ್ನು ಹಝುರ್‌ಮೌತ್ ಪ್ರದೇಶದ ತೆರಿಗೆ ಸಂಗ್ರಹಕರಾಗಿ ನಿಶ್ಚಯಿಸಲಾಯಿತು. ಹಝ್ರತ್ ಉಮರ್‌ರವರ ಕಾಲಘಟ್ಟದ ತನಕ ಅವರು ಇದೇ ಕೆಲಸದಲ್ಲಿ ನಿಯೋಜಿತರಾಗಿದ್ದರು. ನಂತರ ಅವರು ಆ ಕೆಲಸ ಬಿಟ್ಟು ಕೂಫದಲ್ಲಿ ವಾಸಿಸಲು ತೊಡಗಿದರು. ಹಿಜರಿ 41ರಲ್ಲಿ ಅವರು ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿ ಮುಅತಿಬ್ ಬಿನ್ ಉಬೈದ್. ಅವರು ಬದರ್ ಮತ್ತು ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು **ಯೌಮುರ್ರಜೀಅ್**‌ನಲ್ಲಿ ಶಹೀದರಾದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಆ ದಿನ ಮುಸ್ಲಿಮರಿಗೆ ಬಹಳ ಅಪಾಯಕರ ದಿನವಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ನಾಲ್ಕು ದಿಕ್ಕುಗಳಿಂದಲೂ ಭಯ ಹುಟ್ಟಿಸುವ ಸಮಾಚಾರಗಳು ಬರುತ್ತಿದ್ದುವು. ಆದರೆ ಎಲ್ಲದಕ್ಕಿಂತಲೂ ಹೆಚ್ಚಿನ ಅಪಾಯ ಮಕ್ಕದ ಖುರೈಶಿಗಳ ಕಡೆಯಿಂದ ಇತ್ತು. ಅವರು ಉಹುದ್ ಯುದ್ಧದ ಕಾರಣ ಬಹಳ ಧೈರ್ಯ ಹೊಂದಿದ್ದರು ಮತ್ತು ಅವರಿಗೆ ಯುದ್ಧೋತ್ಸಾಹವೂ ಇತ್ತು. ಈ ಅಪಾಯವನ್ನು ಪರಿಗಣಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜರಿ 4 ಸಫರ್ ತಿಂಗಳಲ್ಲಿ ತನ್ನ ಸಹಾಬರ ಒಂದು ಗುಂಪನ್ನು ರಚಿಸಿ ಅದರ ಅಮೀರರಾಗಿ ಅಹ್‌ಸನ್ ಬಿನ್ ಸಾಬಿತರನ್ನು ನೇಮಿಸಿದರು. ಅವರು ರಹಸ್ಯವಾಗಿ ಮಕ್ಕದ ಕಡೆಗೆ ಹೋಗಿ ಖುರೈಶರ ಸ್ಥಿತಿಯ ಬಗ್ಗೆ ತಿಳಿಯಬೇಕೆಂದೂ ಅವರ ಕಾರ್ಯಕ್ರಮಗಳು ಮತ್ತು ನಿರ್ಧಾರಗಳ ಬಗ್ಗೆ ತಿಳಿಸಬೇಕೆಂದೂ ಹೇಳಿದರು. ಆದರೆ ಈ ಜನರು ಮಕ್ಕದ ಕಡೆಗೆ ಹೊರಡುವ ಮೊದಲು ಅಝಲ್ ಮತ್ತು ಖಾರ ಗೋತ್ರದ ಕೆಲವು ಜನರು ಬಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ನಮ್ಮ ಗೋತ್ರಗಳ ಅನೇಕ ಜನರು ಇಸ್ಲಾಮಿನ ಬಗ್ಗೆ ಒಲವುಳ್ಳವರಾಗಿದ್ದಾರೆ. ತಾವು ಕೆಲವು ಜನರನ್ನು ನಮ್ಮ ಬಳಿಗೆ ಕಳುಹಿಸಿರಿ. ಅವರು ಇಸ್ಲಾಮ್ ಬಗ್ಗೆ

ವಿವರಿಸಲಿ. ನಮ್ಮನ್ನು ಮುಸ್ಲಿಮರನ್ನಾಗಿ ಮಾಡಲಿ ಎಂದು ಹೇಳಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದ ಕಡೆಗೆ ಹೋಗಲು ರೂಪಿಸಿದ ಆ ಸಂಘದ ಜನರನ್ನು ಅವರೊಂದಿಗೆ ಕಳುಹಿಸಿದರು. ವಾಸ್ತವಿಕವಾಗಿ ಆ ಜನರು ಸುಳ್ಳುಗಾರರಾಗಿದ್ದರು. ಬನೂ ಲಿಹಾನ್ ಗೋತ್ರದವರ ಪ್ರೇರೇಪಣೆಯಿಂದ ಮದೀನಕ್ಕೆ ಆಗಮಿಸಿದ್ದರು. ಬನೂ ಲಿಹಾನ್ ಗೋತ್ರ ತಮ್ಮ ನಾಯಕ ಸುಫಿಯಾನ್ ಬಿನ್ ಖಾಲಿದನ ಹತ್ಯೆಗೆ ಪ್ರತೀಕಾರ ಮಾಡಬಯಸಿದ್ದರು ಮತ್ತು ಮೇಲಿನಂತೆ ಷಡ್ಯಂತರ ರೂಪಿಸಿದ್ದರು. ಮುಸ್ಲಿಮರು ಮದೀನದಿಂದ ಹೊರಗೆ ಬಂದಾಗ ಅವರ ಮೇಲೆ ಆಕ್ರಮಣ ಮಾಡುವ ನಿರ್ಧಾರ ಮಾಡಿದ್ದರು. ಹಾಗೆ ಅವರು ಮಕ್ಕ ಮತ್ತು ಅಸ್‌ಫಾನ್ ಮಧ್ಯೆ ತಲಪಿದಾಗ ಆ ಇಬ್ಬರು ವಂಚಕರು ಬನೂ ಲಿಹಾನ್ ಗೋತ್ರದವರಿಗೆ ರಹಸ್ಯ ಸಮಾಚಾರ ತಲಪಿಸಿದರು. ನಮ್ಮೊಂದಿಗೆ ಮುಸ್ಲಿಮರು ಬರುತ್ತಿದ್ದಾರೆ ನೀವು ಬನ್ನಿರಿ ಎಂದು ತಿಳಿಸಿದರು. ಈ ವಿಷಯ ತಿಳಿದ ಬನೂ ಲಿಹಾನ್ ಗೋತ್ರದ ಇನ್ನೂರು ಯುವಕರು– ಅವರಲ್ಲಿ ನೂರು ಜನರು ಬಿಲ್ಲುಬಾಣ ಹೊಂದಿದ್ದರು– ಮುಸ್ಲಿಮರನ್ನು ಬೆನ್ನಟ್ಟಲು ಹೊರಟರು. ಅವರು ರಜೀಅ್ ಎಂಬ ಸ್ಥಳದಲ್ಲಿ ಮುಸ್ಲಿಮರನ್ನು ಆಕ್ರಮಿಸಿದರು. ಹತ್ತು ಜನರು ಇನ್ನೂರು ಸೈನಿಕರೊಂದಿಗೆ ಹೋರಾಡುವುದಾದರೂ ಹೇಗೆ? ಆದುದರಿಂದ ಆ ಹತ್ತು ಜನರು ಒಂದು ಬೆಟ್ಟವನ್ನೇರಿ ಅಲ್ಲಿಂದ ಪ್ರತಿರೋದಕ್ಕೆ ಸಿದ್ಧರಾದರು. ಅವಿಶ್ವಾಸಿಗಳು ಅವರಿಗೆ ಕೂಗಿ ಹೇಳಿದರು: ನೀವು ಬೆಟ್ಟದಿಂದ ಇಳಿದು ಬನ್ನಿರಿ. ನಾವು ನಿಮ್ಮನ್ನು ಕೊಲ್ಲುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತೇವೆ ಎಂದು ಹೇಳಿದರು. ಆಸಿಮ್ ರಝಿಯಲ್ಲಾಹು ಅನ್‌ಹು ಹೇಳಿದರು; ನಮಗೆ ನಿಮ್ಮ ಪ್ರತಿಜ್ಞೆ ಬಗ್ಗೆ ವಿಶ್ವಾಸವಿಲ್ಲ. ಅನಂತರ ಅವರು ಆಕಾಶದ ಕಡೆಗೆ ನೋಡಿ ಹೇಳಿದರು– ಓ ಅಲ್ಲಾಹ್, ನೀನು ನಮ್ಮ ಸ್ಥಿತಿಯನ್ನು ಕಾಣುತ್ತಿರುವೆ. ನಮ್ಮ ಈ ಸ್ಥಿತಿಯ ಬಗ್ಗೆ ನಿನ್ನ ಸಂದೇಶವಾಹಕರಿಗೆ ತಿಳಿಸು. ಅನಂತರ ಆಸಿಮ್ ಮತ್ತು ಅವರ ಜೊತೆಗಾರರು ಹೋರಾಡುತ್ತಾ ಶಹೀದರಾದರು.

ಇನ್ನೊಬ್ಬ ಬದರೀ ಸಹಾಬಿ ಹಝ್ರತ್ ಖಾಲಿದ್ ಬಿನ್ ಬಕೀರ್ ಆಗಿದ್ದಾರೆ. ಹಝ್ರತ್ ಖಾಲಿದ್ ಬಿನ್ ಬಕೀರ್, ಆಖಿಲ್, ಆಮಿರ್ ಮತ್ತು ಅಯಾಸ್ ಒಟ್ಟಿಗೆ ಸೇರಿ ದಾರ್ ಅರ್‌ಖಮ್‌ನಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದ್ದರು. ದಾರ್‌ಅರ್‌ಖಮ್‌ನಲ್ಲಿ ಎಲ್ಲರಿಗಿಂತ ಮೊದಲು ಈ ಸಹೋದರರೇ ಮುಸ್ಲಿಮರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಖಾಲಿದ್ ಬಿನ್ ಬಕೀರ್ ಮತ್ತು ಹಝ್ರತ್ ಝೈದ್ ಬಿನ್ ದಸ್‌ನರ ಮಧ್ಯೆ ಭ್ರಾತೃಸಂಬಂಧ ಸ್ಥಾಪಿಸಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಹಿಜರಿ 4ನೇ ಸಫರ್ ತಿಂಗಳಲ್ಲಿ ತನ್ನ 34ನೇ ವಯಸ್ಸಿನಲ್ಲಿ ರಜೀಅ್ ಯುದ್ಧದಲ್ಲಿ ಆಸಿಮ್ ಬಿನ್ ಸಾಬಿತ್ ಮತ್ತು ಮುರ್‌ಸಿದ್ ಬಿನ್ ಅಬೀ ಮುರ್‌ಸಿದ್ ಗನವಿಯೊಂದಿಗೆ ಹೋರಾಡುತ್ತಾ ಶಹೀದರಾದರು.

ಈ ಜನರು ಧರ್ಮವನ್ನು ಸಂರಕ್ಷಿಸಲು ಮತ್ತು ತಮ್ಮ ವಿಶ್ವಾಸವನ್ನು ಸಂರಕ್ಷಿಸಲು ತಮ್ಮ ಜೀವವನ್ನು ಬಲಿದಾನವಾಗಿ ನೀಡಿದರು. ಹಾಗೆ ಅವರು ಅಲ್ಲಾಹನ ಸಂಪ್ರೀತಿ ಗಳಿಸುವವರಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಂದು ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ: ಸಂದೇಶವಾಹಕರನ್ನು ನಿಯೋಜಿಸುವ ಅಲ್ಲಾಹನಿಗೆ ಕೃತಜ್ಞತೆಗಳು. ಅವನು ಔದಾರ್ಯವಂತನೂ ದುಃಖವನ್ನು ದೂರ ಸರಿಸುವವನೂ ಆಗಿದ್ದಾನೆ. ಅವನ ಸಂದೇಶವಾಹಕರಿಗೆ ದುರೂದ್ ಮತ್ತು ಸಲಾಮ್. ಅವರು ಇನ್ಸ್ ಮತ್ತು ಜಿನ್ನ್‌ಗಳ ಇಮಾಮರೂ ಪರಿಶುದ್ಧ ಹೃದಯಿಯೂ ಸ್ವರ್ಗದ ಕಡೆಗೆ ಸೆಳೆಯುವವರೂ ಆಗಿದ್ದಾರೆ. ಅವರ ಸಹಾಬರಿಗೂ ಸಲಾಮ್. ಅವರು ಸತ್ಯವಿಶ್ವಾಸದ ಕಾರಂಜಿಯ ಕಡೆಗೆ ದಾಹಪೀಡಿತರ ಹಾಗೆ ಓಡಿದರು. ಪಥಭ್ರಷ್ಟತೆಯ ಅಂಧಕಾರಮಯ ರಾತ್ರಿಗಳನ್ನು ಜ್ಞಾನದ ಮತ್ತು ಕರ್ಮಾನುಷ್ಠಾನದ ಪರಿಪೂರ್ಣತೆಯ ಬೆಳಕಿನಿಂದ ಬೆಳಗಿಸಿದರು. ಅವರು ಹಗಲಿನಲ್ಲಿ ಸಿಂಹವೂ ರಾತ್ರಿಗಳಲ್ಲಿ ದೇವಭಕ್ತರೂ ಧರ್ಮದ ನಕ್ಷತ್ರಗಳೂ ಆಗಿದ್ದರು.

ಅಲ್ಲಾಹನು ನಮ್ಮನ್ನು ಸಹ ಜ್ಞಾನ ಮತ್ತು ಕರ್ಮಗಳನ್ನು ಉತ್ತಮ ಪಡಿಸಲು ಪ್ರಯತ್ನಿಸುವವರನ್ನಾಗಿ ಮಾಡಲಿ. ರಾತ್ರಿಗಳ ಆರಾಧನೆಯ ಮಟ್ಟವನ್ನು ಉತ್ತಮಪಡಿಸಲು ಭಾಗ್ಯಗಳಿಸುವವರನ್ನಾಗಿ ಮಾಡಲಿ – ಆಮೀನ್.

(ಖುತ್‌ಬ ಜುಮುಅದ ನಂತರ ಹುಝೂರ್ ಯುಗಾಂಡದ ಮುಬಲ್ಲಿಗ್ ಮುಕರ್ರಮ್ ಇಸ್ಮಾಈಲ್ ಮಾಲಾಗಾಲಾ ಸಾಹಿಬರ ಸದ್ಗುಣಗಳನ್ನು ವಿವರಿಸಿದರು. ಅವರು 2018 ಮೇ 18ರಂದು ನಿಧನ ಹೊಂದಿದರು – ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್. ಜುಮುಅ ನಮಾಝ್ ನಂತರ ಅವರ ನಮಾಝೆ ಜನಾಝು ಗಾಯಿಬ್ ನಿರ್ವಹಿಸಿದರು.)

*****


***Friday Sermon delivered by Hadrath Khaleefatul Masih Al Khamis (atba)***

*At Masjid Baithul Futhuh, London. On 01-06-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon